# ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1609 |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು ) |
| ಉತ್ತರಿಸಬೇಕಾದ ದಿನಾಂಕ | 18.03.2026<br>(ಕಂದಾಯ ಇಲಾಖೆಯಿಂದ ವರ್ಗಾವಣೆಯಾಗಿರುತ್ತದೆ). |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಒ.ಬಿ.ಸಿ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಮಾಣ ಪತ್ರ ಪಡೆಯಲು, ಕೇಂದ್ರ ಸರ್ಕಾರದ ನಿಯಮಗಳನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆಯೇ; | ಕೇಂದ್ರ ಸರ್ಕಾರವು ಅಧಿಕೃತ ಜ್ಞಾಪನ ಸಂಖ್ಯೆ: 36012/22/93 ದಿನಾಂಕ:08.09.1993 ರಂತೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಹಾಗೂ ಕೆನೆಪದರ (ಕ್ರೀಮಿಲೇಯರ್) ನೀತಿಯನ್ನು ಅಳವಡಿಸಿ ಕೊಳ್ಳಲಾಗಿರುತ್ತದೆ. ರಾಜ್ಯ ಸರ್ಕಾರವು ಈ ಆದೇಶದಲ್ಲಿನ ಕೆಲವೊಂದು ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಂತೆ ರಾಜ್ಯ ಸರ್ಕಾರದ ವ್ಯಾಪ್ತಿಗೆ ತನ್ನದೇ ಆದ ಮೀಸಲಾತಿ ಹಾಗೂ ಕೆನೆಪದರ (ಕ್ರೀಮಿಲೇಯರ್) ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. |
| ಆ) | ಸದರಿ ಪ್ರಮಾಣ ಪತ್ರ ಪಡೆಯುವಾಗ ಗ್ರೂಪ್ ಬಿ ಮಹಿಳಾ ಅಧಿಕಾರಿ 40 ವರ್ಷದ ನಂತರ ಗ್ರೂಪ್ ಎ ಹುದ್ದೆಗೆ ಬಡ್ತಿ ಪಡೆದಲ್ಲಿ ಸದರಿ ಅಧಿಕಾರಿಯ ಸಂಬಳವನ್ನು ವಾರ್ಷಿಕ ಆದಾಯಕ್ಕೆ ಪರಿಗಣಿಸಲಾಗುತ್ತಿದೆಯೇ; ಇದಕ್ಕೆ ಕಾರಣಗಳೇನು; | ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: 36012/22/93 ದಿನಾಂಕ:08.09.1993ರಲ್ಲಿ ಕೇಂದ್ರ ಸರ್ಕಾರವು ಅಳವಡಿಸಿಕೊಂಡಿರುವ ಕ್ರೀಮಿಲೇಯರ್ ನೀತಿಯಂತೆ ಅಭ್ಯರ್ಥಿಯ ವಾರ್ಷಿಕ ಆದಾಯವನ್ನು ಪರಿಗಣಿಸುವಂತಿಲ್ಲ.<br><br>ಸದರಿ ಆದೇಶದಂತೆ ಅಭ್ಯರ್ಥಿಯ ಪೋಷಕರು Class I / Group A ಆಗಿ ನೇರ ನೇಮಕಾತಿಯಾಗಿದ್ದಲ್ಲಿ ಅಥವಾ ಪೋಷಕರು ಇಬ್ಬರೂ Class II / Group B ಆಗಿ ನೇರ ನೇಮಕಾತಿಯಾಗಿದ್ದಲ್ಲಿ ಅಥವಾ ಪೋಷಕರಲ್ಲಿ ಅಭ್ಯರ್ಥಿಯ ತಂದೆಯು 40 ವರ್ಷ ಅಥವಾ ಅದಕ್ಕೂ ಮೊದಲು Class II / Group B ಹುದ್ದೆಯಿಂದ Class I / Group A ಹುದ್ದೆಗೆ ಮುಂಬಡ್ತಿ ಹೊಂದಿದಲ್ಲಿ ಇಂತಹ ಪೋಷಕರು ಕ್ರೀಮಿ ಲೇಯರ್ ವ್ಯಾಪ್ತಿಗೆ ಒಳಪಡುತ್ತಾರೆ. |

...2

| | | |
|---|---|---|
| ಇ) | ಸದರಿ ಮಹಿಳಾ ಅಧಿಕಾರಿಯ ಕುಟುಂಬದ ಆದಾಯವು ಕಳೆದ ಮೂರು ಆರ್ಥಿಕ ವರ್ಷದಲ್ಲಿ ಯಾವುದಾದರೂ ಒಂದು ಸಾಲಿನಲ್ಲಿ ವಾರ್ಷಿಕ ಆದಾಯವು ಎಂಟು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಸದರಿ ಓ.ಬಿ.ಸಿ ಪ್ರಮಾಣ ಪತ್ರ ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; | ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: 36012/22/93 ದಿನಾಂಕ:08.09.1993 ರ ಕ್ರಮ ಸಂಖ್ಯೆ VI ರಂತೆ ಸತತ 3 ವರ್ಷಗಳಲ್ಲಿ ಪೋಷಕರ ವಾರ್ಷಿಕ ಆದಾಯವು ರೂ.8 ಲಕ್ಷಗಳು ಇಲ್ಲದಿದ್ದಲ್ಲಿ, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ OBC ಪ್ರಮಾಣ ಪತ್ರವನ್ನು ಪಡೆಯ ಬಹುದಾಗಿರುತ್ತದೆ. |
| ಈ) | ಓ.ಬಿ.ಸಿ ಪ್ರಮಾಣ ಪತ್ರ ಪಡೆಯಲು ಕೇಂದ್ರ ಸರ್ಕಾರವು ಯಾವ ಮಾನದಂಡಗಳನ್ನು ನಿಗದಿ ಪಡಿಸಿದೆ; ಇದಕ್ಕೆ ತಾರ್ಕಿಕ ಕಾರಣಗಳೇನು ? (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: 36012/22/93 ದಿನಾಂಕ:08.09.1993 ರಂತೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ OBC ಪ್ರಮಾಣ ಪತ್ರ ಪಡೆಯಲು ಕೇಂದ್ರ ಸರ್ಕಾರವು ಅಳವಡಿಸಿಕೊಂಡಿರುವ ಮಾನದಂಡಗಳ ವಿವರಗಳನ್ನು www.ncbc.nic.in ಲಿಂಕ್ ನಲ್ಲಿ ಪಡೆಯಬಹುದಾಗಿದೆ. |

**ಸಂಖ್ಯೆ: ಹಿಂವಕ 107 ಬಿಸಿಎ 2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು